## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.394/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಜಿ. ವಸಂತರಾಜ್ | CW: 10 | PW: 3 |
| ತಂದೆಯ ಹೆಸರು | : | ಜಿ. ಹಾಲಪ್ಪ | | |
| ವಯಸ್ಸು | : | 62 | | |
| ವೃತ್ತಿ | : | ಟ್ರೈವರ್ | | |
| ವಾಸಸ್ಥಳ | : | ನೆಲವಾಗಿಲೂ, ಶಿಕಾರಿಪುರ ತಾಲ್ಲೂಕು | | |

ದಿನಾಂಕಃ 17.10.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ-

ಆರೋಪಿ ಗೊತ್ತಿಲ್ಲ. ಮೃತ ನಾಗೇಂದ್ರಪ್ಪ ಗೊತ್ತು. ಚಾಸಾ.1 ಗೊತ್ತು. ಚಾಸಾ.9 ಮತ್ತು 11 ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ದಿಃ 10.11.2019 ರಂದು ನಾನು ಮತ್ತು ಚಾಸಾ 1 ರವರು ಕೆಎ 15 ಎ 3528 ನಂಬರ್ ನ ಗಜಾನನ ಬಸ್ ನಲ್ಲಿ ನಾನು ಬಸ್ ಚಾಲಕ ಆಗಿದ್ದು ಆ ದಿನ ಮೇಲ್ಕಂಡ ಬಸ್ ನಲ್ಲಿ ಮೇಲ್ಕಂಡ ಬಸ್ ನ ನಂಬರ್ ನಲ್ಲಿ

ಸಿದ್ದಾಪುರ ದಿಂದ ಶಿವಮೊಗ್ಗಕ್ಕೆ ಹೇಗಲು ಶಿಕಾರಿಪುರ ಸವಳಂಗ ಮಾರ್ಗವಾಗಿ ಬೆಳಗ್ಗೆ 11.55 ಗಂಟೆಗೆ ಸವಳಂಗ ಬಸ್ ನಿಲ್ದಾಣಕ್ಕೆ ಬರುತ್ತಿರುವಾಗ ಸವಳಂಗ ಗ್ರಾಮದ ಸರ್ಕಾರಿ ಆಸ್ಪತ್ರೆಯ ಸಮೀಪ ಸವಳಂಗ ಶಿಕಾರಿಪುರದ ರಸ್ತೆಯಲ್ಲಿ ನಮ್ಮ ಬಸ್ ಗಜಾನನ ಕಂಪನಿಯ ಬಸ್ ಅಧಿಕಾರಿಯಾದ ನಾಗೇಂದ್ರಪ್ಪ ರವರು ನಮ್ಮ ಬಸ್ ನ್ನು ಚೆಕ್ ಮಾಡಲು ಬಸ್ ನ್ನು ನಿಲ್ಲಿಸಲು ಸೂಚಿಸಿದ್ದರಿಂದ ನಾನು ಬಸ್ ನ್ನು ನಿಲ್ಲಿಸಿದ್ದು ಆ ಸಮಯಕ್ಕೆ ನಾಗೇಂದ್ರಪ್ಪ ರವರು ಬಸ್ ನ್ನು ಹತ್ತಲು ಬರುತ್ತಿರುವಾಗ ಅದೇ ವೇಳೆಗೆ ಶಿಕಾರಿಪುರ ಕಡೆಯಿಂದ ಸವಳಂಗ ಕಡೆಗೆ ಸಾಯಿ ಮಂಜೂನಾಥ ಬಸ್ ಚಾಲಕನು ತನ್ನ ಬಸ್ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬಸ್ಸಿಗೆ ಹತ್ತಲು ಬರುತ್ತಿದ್ದ ನಾಗೇಂದ್ರಪ್ಪರವರಿಗೆ ಡಿಕ್ಕಿಪಡಿಸಿ ಅಪಘಾತ ಉಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ 1 ರವರು ಹಾಗೂ ಅಲ್ಲಿಯೇ ಇದ್ದ ಸ್ಥಳೀಯರು ಸೇರಿ ನಾಗೇಂದ್ರಪ್ಪರವರನ್ನು ನೋಡಿದಾಗ ಅವರ ತಲೆಗೆ ಪೆಟ್ಟು ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಬಸ್ ನಂಬರ್ ಕೆಎ 15 6864 ಎಂದರೆ ಸರಿಯಲ್ಲ. ನಂತರ ಯಾವುದೇ ಒಂದು ಆಟೋದಲ್ಲಿ ನಾವುಗಳು ನಾಗೆಂದ್ರಪ್ಪ ರವರನ್ನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿರುತ್ತೇವೆ ಎಂದರೇ ಸರಿಯಲ್ಲ. ನಂತರ ವೈದ್ಯರ ಸಲಹೆಯ ಮೇರೆಗೆ ನಾಗೇಂದ್ರಪ್ಪ ರವರನ್ನು ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ದಾಖಲಿಸಿದೆವು ಎಂದರ ಸರಿಯಲ್ಲ. ಅದೇ ದಿನ ನಾಗೇಂದ್ರಪ್ಪರವರಿಗೆ ಚಿಕಿತ್ಸೆ ಫಲಕಾರಿಯಾಗದೇ ಮಧ್ಯಾಹ್ನ 3.15 ಕ್ಕೆ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ.13 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.